NP– 020

# IV Semester B.B.A. Examination, August/September 2023
## (NEP)
## ಕನ್ನಡ
## ವ್ಯವಹಾರ ನಿರ್ವಹಣಾ ಕನ್ನಡ - 4

Time : 2½ Hours Max. Marks : 60

I. ಎರಡು ಪ್ರಶ್ನೆಗಳಿಗೆ ಉತ್ತರ ಬರೆಯಿರಿ (ಇನ್ನೂರು ಪದಗಳಿಗೆ ಮೀರದಂತೆ). (2×10=20)

1) ಅಧಿಕಾರ ರಾಜಕಾರಣದ ಮುಖಗಳನ್ನು ಭರತ–ಬಾಹುಬಲಿ ಸಂಘರ್ಷ ಪ್ರತಿನಿಧಿಸುವ ಬಗೆಯನ್ನು ವಿವರಿಸಿ.

2) ಕಮಲಾದೇವಿಯವರು ಭಾಗವಹಿಸಿದ ಹೋರಾಟಗಳ ಬಗ್ಗೆ ಬರೆಯಿರಿ.

3) ಶಿವಾಜಿ ಮತ್ತು ಬಿಜಾಪುರದ ಸುಲ್ತಾನರ ನಡುವಣ ಯುದ್ಧ ಮತ್ತು ಶಾಂತಿಗಳ ಬಗ್ಗೆ ಬರೆಯಿರಿ.

II. ನಾಲ್ಕು ಪ್ರಶ್ನೆಗಳಿಗೆ ಉತ್ತರ ಬರೆಯಿರಿ (ನೂರು ಪದಗಳಿಗೆ ಮೀರದಂತೆ). (4×5=20)

1) ಜನರಲ್ ಸ್ಮಟ್ಸ್‌ಗೆ ಗಾಂಧೀಜಿಯ ಅಹಿಂಸಾ ತತ್ವದ ಅನನ್ಯತೆ ಅರಿವಾದ ಸಂದರ್ಭವನ್ನು ಬರೆಯಿರಿ.

2) ಹೈನುಗಾರಿಕೆ ಬಗ್ಗೆ ಲೇಖಕರ ಅಭಿಪ್ರಾಯಗಳನ್ನು ಬರೆಯಿರಿ.

3) ಎಡುಕಾಂಪ್ ಕಂಪನಿಯಲ್ಲಿ ನೌಕರರ ನಡುವೆ ಸೌಹಾರ್ದತೆ ಚೆನ್ನಾಗಿರಲು ಕಾರಣಗಳೇನು ?

4) ಅಣುಬಾಂಬಿನ ಪ್ರಯೋಗ ಮತ್ತು ಬಳಕೆಯ ಪರಿಣಾಮಗಳನ್ನು ಕುರಿತು ಬರೆಯಿರಿ.

5) ಚಾಂದ್‌ಖಾನ್ ಯಾರು ? ಅವನು ಮರಣ ಹೊಂದಿದುದು ಹೇಗೆ ?

6) ಚೌಪಾಟಿ ಸಭೆ ಕಮಲಾ ದೇವಿಯವರ ಮೇಲೆ ಬೀರಿದ ಪರಿಣಾಮಗಳೇನು ?

III. ಈ ಕೆಳಕಂಡ ಕಂಡಿಕೆಯನ್ನು ಇಂಗ್ಲೀಷ್‌ಗೆ ಭಾಷಾಂತರಿಸಿ. (1×4=4)

ಅನ್ಯಾಯವನ್ನು ಗಾಂಧೀಜಿ ಎಂದೂ ಸಹಿಸಿಕೊಳ್ಳುತ್ತಿರಲಿಲ್ಲ. ಅನ್ಯಾಯದ ಸ್ವರೂಪ ಮತ್ತು ಅದರ ಪ್ರಮಾಣಗಳ ಬಹು ಸ್ಪಷ್ಟವಾದ ಕಲ್ಪನೆ ಅವರಿಗಿತ್ತು. ಇದನ್ನು ಕೂಲಂಕಷವಾಗಿ ಪರಿಶೀಲಿಸಿದ ಬಳಿಕವೇ ಅವರು ಮುಂದಿನ ನಿರ್ಧಾರಕ್ಕೆ ಬರುತ್ತಿದ್ದರು. ಅನ್ಯಾಯವೆಂದು ಕಂಡುಬಂದ ಪ್ರಸಂಗಗಳಲ್ಲಿ ಹಿಂಸೆಗೆ ಪ್ರತಿ ಹಿಂಸೆ ಎನ್ನುವ ಕಲ್ಪನೆ ಅವರಿಗೆ ಅಡ್ಡ ಬರುತ್ತಿರಲಿಲ್ಲ. ದೇವರ ಗುಡಿಗೆ ಸಮಾನವಾದ ದೇಹದ ಮೇಲೆ ಮಾಡುವ ಹಲ್ಲೆಯನ್ನು ಅವರೆಂದೂ ಕ್ಷಮಿಸುತ್ತಿರಲಿಲ್ಲ.

IV. ಕರ್ನಾಟಕ ಫಾರ್ಮಾಸ್ಯೂಟಿಕಲ್ಸ್ ಲಿಮಿಟೆಡ್ ಕಂಪನಿಯ ಫಾರ್ಮಾಸಿಸ್ಟ್ ಹುದ್ದೆಗಾಗಿ ಅರ್ಜಿ ಬರೆಯಿರಿ. (1×4=4)

V. ಕೆಳಕಂಡ ಸನ್ನಿವೇಶ ಆಧರಿಸಿ ಒಂದು ಕವಿತೆ / ಕಥೆ ಬರೆದು ಸೂಕ್ತ ಶೀರ್ಷಿಕೆ ನೀಡಿ. (90 ಪದಗಳಿಗೆ ಮೀರದಂತೆ) (1×4=4)

ಸನ್ನಿವೇಶ : ಬಸ್‌ಸ್ಟ್ಯಾಂಡಿನಲ್ಲಿ ಅಳುತ್ತ ನಿಂತಿರುವ ಬಾಲಕ.

VI. ಕೆಳಕಂಡ ಗದ್ಯ ಕಂಡಿಕೆಯನ್ನು ಸಂಭಾಷಣೆಯಾಗಿ ಪರಿವರ್ತಿಸಿ. (1×4=4)

ಆತ ಕಡ್ಡಿಯ ಮೇಲೆ ಕಡ್ಡಿ ಗೀರಿ ಬೆಳಕು ಮಾಡುತ್ತಲಿದ್ದ. ಬಂದಿರಾ ? ಅಂತೂ ಬಂದಿರಾ ಒಮ್ಮೆ; ಎಂದಳಾಕೆ ಅತ್ಯಂತ ಕ್ಷೀಣವಾದ ದನಿಯಲ್ಲಿ, ಅಯ್ಯೋ ನನ್ನ ನಾಗೂ, ಏನು ಗತಿ ಮಾಡಿದ್ದಾರಲ್ಲೆ ನಿನಗೆ ? ಎಂದು ಅಳುವ ದನಿಯಲ್ಲಿ ನುಡಿಯುತ್ತಾ ಚೆನ್ನಬಸಪ್ಪ ಅವಳನ್ನೆತ್ತಿ ತೊಡೆಯ ಮೇಲೆ ಮಲಗಿಸಿಕೊಂಡ. ಒಂದು ಕ್ಷಣ ಪತಿಯ ತೊಡೆಯ ಮೇಲೊರಗಿದ್ದು ನಾಗಮ್ಮ ಸಮಾಧಾನದ ಉಸಿರು ಹಾಕಿದಳು. ಆನಂತರ ಮೆಲ್ಲಗಿನ ದನಿಯಲ್ಲಿ ಹೇಳಿದಳು. ನೀವೆಂದು ಬರ್‍ತಿರೋ ಅಂತ ಕಾಯ್ತಾ ಇದ್ದೆ. ನಿಮ್ಮ ತೊಡೆ ಮ್ಯಾಲೆ ಬಿದ್ದುಕೊಂಡು ಪ್ರಾಣಬಿಡಬೇಕು ಅಂತ ಜೀವ ಹಿಡಿದಿದ್ದೆ. ನೀವು ಬಂದಿರಿ ಇನ್ನು ಆನಂದದಿಂದ ಪ್ರಾಣ ಬಿಡ್ತೀನಿ ... ಆದರೆ .... ಆದರೆ ... ಆದರೇನು ನನ್ನ ಬಂಗಾರಾ ಎಂದು ಚೆನ್ನಬಸಪ್ಪ ಹುಚ್ಚನಂತೆ ಅವಳನ್ನು ಮುದ್ದಿಸುತ್ತಾನೆ. ಆದರೆ ... ಆದರೆ .... ನೀವಿಲ್ಲಿಗೆ ಬರಬಾರದಾಗಿತ್ತು. ಇನ್ನೂ ಈ ಪಿಶಾಚಿಗಳು ನಿಮ್ಮನ್ನು ಬಿಡೋದಿಲ್ಲ. ಅಯ್ಯೋ ನನಗಾಗಿ ನೀವು ಬಂದಿರೇನು ? ನೀವಿಲ್ಲಿ ನಿಲ್ಲಬೇಡಿ. ಅವರ ಕೈಗೆ ಸಿಕ್ಕಬೇಡಿ ಇದೆ ನನ್ನ ಆಸೆ ಎಂದು ಹೇಳುತ್ತಿದ್ದ ಹಾಗೇ ಅವಳ ಶರೀರ ಹಠಾತ್ತಾಗಿ ಕೆಳಕ್ಕುರುಳಿತು. ಅವಳ ದೇಹವನ್ನು ಎದೆಗೊತ್ತಿಕೊಂಡು ಚೆನ್ನಬಸಪ್ಪ ಹುಚ್ಚನಂತೆ ಮಾತನಾಡಿದ. ಸಿಕ್ಕೊಲ್ಲ ಕಣೇ ನಾಗೂ. ನಾನು ಪೋಲೀಸರ ಕೈಗೆ ಸಿಕ್ಕಲ್ಲ.

VII. ಇವುಗಳಿಗೆ ಒಂದೊಂದು ಸರಿ ಉತ್ತರವನ್ನು ಗುರುತಿಸಿ ಬರೆಯಿರಿ. (4×1=4)

1) ಚಕ್ರೇಶ ಯಾರು ?

ಎ) ಬಾಹುಬಲಿ ಬಿ) ಭರತ

ಸಿ) ಕೃಷ್ಣ ಡಿ) ಅರ್ಜುನ

2) ಕೀರ್ತಿವರ್ಮನ ಕೃತಿ ಯಾವುದು ?

ಎ) ಗೋವೈದ್ಯ ಬಿ) ನಕುಲ ಸಂಹಿತೆ

ಸಿ) ಶಾಲಹೋತ್ರ ಸಂಹಿತೆ ಡಿ) ಹಸ್ತಾಯುರ್ವೇದ

3) ಜೋಹಾನ್ಸ್ ಬರ್ಗ್‌ನ ಗಣಿ ಕಾರ್ಮಿಕರ ಮುಷ್ಕರವನ್ನು ಬೆಂಬಲಿಸಿದವರು ಯಾರು ?

ಎ) ಸ್ಮಟ್ಸ್ ಬಿ) ಗಾಂಧೀಜಿ

ಸಿ) ರಾಜಮೋಹನ್ ಗಾಂಧಿ ಡಿ) ನೆಲ್ಸನ್ ಮಂಡೇಲ

4) ನಾಗಮ್ಮನ ಪರಿಸ್ಥಿತಿ ಮತ್ತು ಇರುವನ್ನು ಚೆನ್ನಬಸಪ್ಪನಿಗೆ ತಿಳಿಸಿದವರು ಯಾರು ?

ಎ) ಕರಿಯಣ್ಣ ಬಿ) ಬಿಳಿಯಣ್ಣ

ಸಿ) ಊರಿನ ಗೌಡ ಡಿ) ಸ್ನೇಹಿತ